2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 13/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚಂದ್ರಮ್ಮ | ಪಿಡಬ್ಲೂ -03 |
| ತಂದೆಯ ಹೆಸರು | - | ಲಕ್ಷ್ಮಣ | ಸಿಡಬ್ಲೂ -03 |
| ವಯಸ್ಸು | - | 42 ವರ್ಷ | |
| ಉದ್ಯೋಗ | - | ಕೂಲಿ | |
| ವಾಸ ಸ್ಥಳ | - | ದೊಡ್ಡಪೇಟೆ, ಕಡೂರು ತಾ. | |

ದಿನಾಂಕಃ 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಈ ಪ್ರಕರಣದ ದೂರುದಾರರು ಹಾಗೂ ಚಾಸಾ.2 ಗೊತ್ತು. ಚಾಸಾ.9 ರವರು ಗೊತ್ತಿಲ್ಲ.

2. ಈಗ ತೋರಿಸಿದ ನಿಪಿ.15 ನೋಟೀಸು ಹಾಗೂ ನಿಪಿ.16 ರ ಸ್ಥಳ ಮಹಜರಿನಲ್ಲಿ ನನ್ನ ಸಹಿ ಇದ್ದು ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.15(ಬಿ) ಮತ್ತು ನಿಪಿ.16(ಬಿ) ಎಂದು ಗುರುತಿಸಲಾಯಿತು.

3. ನಿಪಿ.15 ಮತ್ತು 16 ಕ್ಕೆ ಕಳೆದ ಸುಮಾರು 4 ವರ್ಷಗಳ ಹಿಂದೆ ಚಾಸಾ.1 ಮಂಜುಳರವರ ಮನೆಯ ಹತ್ತಿರ ಮಗು ಮರಣ ಹೊಂದಿದ ವಿಚಾರ ತಿಳಿದು ನಾನು ನೋಡಲು ಹೋದಾಗ ಯಾರೋ ನನ್ನ ಸಹಿ ಪಡೆದರು. ಯಾವ ವಿಚಾರಕ್ಕೆ ಸಹಿ ಪಡೆದರು ಗೊತ್ತಿಲ್ಲ. ಯಾವ ವಿಷಯದಲ್ಲಿ ಮಹಜರು

ಮಾಡಿದರು ಎಂದು ಗೊತ್ತಿಲ್ಲ. ನಿಪಿ.15 ಮತ್ತು 16 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಅದೇ ಸಮಯದಲ್ಲಿ ಚಾಸಾ.1 ರವರ ಮನೆಯ ಒಳಗೆ ಈಗ ಈಗ ನೋಡುತ್ತಿರುವ ನಿಪಿ.7 ಫೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕೆ ನಿಪಿ.7 ನ್ನು ಸಂಗ್ರಹಿಸಿದರು ಎಂದು ಗೊತ್ತಿಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ದಿಃ 12.09.2020 ರಂದು ಪೋಲೀಸರು ಸ್ಥಳಕ್ಕೆ ಬಂದಾಗ ಚಾಸಾ.9 ರವರು ಸ್ಥಳ ತೋರಿಸಿದಾಗ, ಪೋಲೀಸರು ನಿಪಿ.15 ರಂತೆ ನೋಟೀಸು ನೀಡಿ ನಿಪಿ.16 ರಂತೆ ಮಹಜರು ಮಾಡಿ, ಈಗ ತೋರಿಸಿದ ಮು.ಮಾ.1 ಬಕೆಟ್ಟನ್ನು ಹಾಜರುಪಡಿಸಿದ್ದನ್ನು ಪೋಲೀಸರು ನನ್ನ ಸಮಕ್ಷಮ ಅಮಾನತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.7 ರಂತೆ ಛಾಯಚಿತ್ರವನ್ನು ಸಂಗ್ರಹಿಸಿದರು ಎಂದರೆ ನನಗೆ ಗೊತ್ತಿಲ್ಲ.
5. ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಹಾಜರಿದ್ದು ತಮ್ಮದೇನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ